ಸಾಕ್ಷಿಯನ್ನು ದಿ: 07.11.2024 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ-1

**<u>ಪಾಟೀಸವಾಲುಃ- ಪ್ರತಿವಾದಿಗಳ ಪರ ವಕೀಲರಿಂದ:-</u>**

1. ನಾನು ಸಹಾಯಕ ಆರಕ್ಷಕ ನಿರೀಕ್ಷಕನಾಗಿ ಕೆಲಸ ಮಾಡಿರುತ್ತೇನೆ. ನಾನು ಈಗ ನಿವೃತ್ತಿ ಹೊಂದಿರುತ್ತೇನೆ. ನಾನು ಸುಮಾರು 39 ವರ್ಷಗಳ ಕಾಲ ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡಿರುತ್ತೇನೆ. ದಾವಾ ಸ್ವತ್ತು ಮೂಲತಃ ಮುರುಗೇಂದ್ರ ಆರಾಧ್ಯರವರಿಗೆ ಸೇರಿದ ಸ್ವತ್ತು. ದಾವಾ ಸ್ವತ್ತಿನಲ್ಲಿರುವ ಮನೆ ಸುಮಾರು 100 ವರ್ಷಗಳ ಹಿಂದೆ ಕಟ್ಟಲಾಗಿದೆ. ರಾಮಾರಾಧ್ಯರಿಗೆ ಇಬ್ಬರು ಮಕ್ಕಳಿದ್ದು ಅವರ ಹೆಸರು ಜಯಕುಮಾರ್ ಆರಾಧ್ಯ ಮತ್ತು ಮುರುಗೇಂದ್ರ ಆರಾಧ್ಯ. ರಾಮಾರಾಧ್ಯರ ಇಬ್ಬರು ಮಕ್ಕಳು ವಿಭಾಗ ಮಾಡಿಕೊಂಡಿರುತ್ತಾರೆ. ಸದರಿ ವಿಭಾಗ ಪತ್ರ ಹಾಜರು ಪಡಿಸಿಲ್ಲ. ಸದರಿ ವಿಭಾಗವನ್ನು ನೋಂದಾಯಿಸಿಕೊಂಡಿರುತ್ತಾರೋ ಇಲ್ಲವೋ ಗೊತ್ತಿಲ್ಲ. ಸದರಿ ವಿಭಾಗವನ್ನು 2010 - 11 ರಲ್ಲಿ ಮಾಡಿಕೊಂಡಿರುತ್ತಾರೆ. ವಿಭಾಗದ ಪ್ರಕಾರ ಮುರುಗೇಂದ್ರ ಆರಾಧ್ಯರಿಗೆ ಪೂ-ಪಃ 22 ಮತ್ತು ಉ-ದಃ 48 ಅಡಿ ಮನೆ ಮತ್ತು ಪೂ-ಪಃ 28 ಅಡಿ ಮತ್ತು ಉ-ದಃ 100 ಅಡಿ ಖಾಲಿ ನಿವೇಶನ ಬಂದಿರುತ್ತದೆ. ಜಯಕುಮಾರ್ ಆರಾಧ್ಯರಿಗೆ ಎಷ್ಟು ಆಸ್ತಿ ಕೊಡಲಾಗಿದೆ ಗೊತ್ತಿಲ್ಲ. ಮುರಗೇಂದ್ರ ಆರಾಧ್ಯನಿಗೆ ಬಂದ ಸ್ವತ್ತಿನ ಚೆಕ್ಕುಬಂದಿ ಪೂರ್ವಕ್ಕೆಃ ಚಿಕ್ಕಲಿಂಗಯ್ಯರವರ ಖಾಲಿ ಜಾಗ, ಪಶ್ಚಿಮಕ್ಕೆಃ ಗಲ್ಲಿ, ಉತ್ತರಕ್ಕೆಃ ಚಿಕ್ಕಲಿಂಗಯ್ಯನ ಜಮೀನು, ದಕ್ಷಿಣಕ್ಕೆಃ ರಸ್ತೆ.

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು</u>**.

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ